O.S.120/2016

PW : 1

ದಿನಾಂಕ 12-09-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀಪಿ ಆರ್ ಕೆ ವಕೀಲರಿಂದಃ

ದಾವಾಸ್ತಿಯ ಉತ್ತರಕ್ಕೆ ಪೂನಾ ಬೆಂಗಳೂರು ರಸ್ತೆಗೆ ಲಗತ್ತಾಗಿ ನಿಮ್ಮ ವಾಸದ ಮನೆ ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಒಂದು ಚಪ್ಪರದ ಮನೆ ದನ ಕರು ಕಟ್ಟಲು ಇತ್ತು ಎನ್ನುತ್ತಾರೆ. ಸದರಿ ಆಸ್ತಿಯ ದಕ್ಷಿಣಕ್ಕೆ ಮೂರು ಮಳಿಗೆಗಳನ್ನು ಕಟ್ಟಿದ್ದೀರಿ ಎಂದರೆ ಸರಿಯಲ್ಲ, ಸಾಕ್ಷಿ ದಾವಾಸ್ತಿಯಲ್ಲಿ ಕಟ್ಟಿದ್ದೇವೆ ಎನ್ನುತ್ತಾರೆ. ಚಪ್ಪರದ ಮನೆ ಇದ್ದ ಜಾಗ ಈಗ ಖಾಲಿ ಇದೆ ಎಂದರೆ ಸಾಕ್ಷಿ ಕಟ್ಟಡ ಕಟ್ಟಿದ್ದೇವೆ ಎನ್ನುತ್ತಾರೆ. ಪ್ಲಾಟ್ ನಂ.90 ರ ಉತ್ತರಕ್ಕೆ 2 ನೇ ಪ್ರತಿವಾದಿಯ ಸ್ವತ್ತಿದೆ ಎಂದರೆ ಸರಿ. ದಾವಾಸ್ತಿಯಲ್ಲಿ ಮಳಿಗೆ ಕಟ್ಟಿಸಿಲ್ಲ, 2 ನೇ ಪ್ರತಿವಾದಿಯ ಆಸ್ತಿಯನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಿದ್ದೀರಿ ಎಂದರೆ ಸುಳ್ಳು. ದಾವಾಸ್ತಿಯನ್ನು ನಗರಸಭೆಯವರು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ಅವರು ಪರವಾನಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು •ಯಾವ ದಿನಾಂಕದಂದು ನಮ್ಮ ಸ್ವಾಧೀನಕ್ಕೆ ತೊಂದರೆ ಮಾಡಿದ್ದಾರೆ ಎಂದು ನೆನಪಿಲ್ಲ, ಅವರು ದಾವಾಸ್ತಿಯನ್ನು ನಾವು ಸ್ವಚ್ಚಗೊಳಿಸುವ ಕಾರ್ಯಕ್ಕೆ ತೊಂದರೆ ಮಾಡಿದ್ದಾರೆ ಆ ಕಾರಣ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಆ ಸಮಯದಲ್ಲಿ ದನಕರುಕಟ್ಟುವ ಜಾಗವನ್ನು ಹೊರತುಪಡಿಸಿ ಉಳಿದ ಜಾಗ ಖಾಲಿ ಇತ್ತು ಎಂದರೆ ಸರಿ. ನೀವು ಪ್ರತಿವಾದಿಗಳ ಸ್ವತ್ತನ್ನು ಸ್ವಚ್ಚ ಗೊಳಿಸಲು ಮುಂದಾದಾಗ ಅವರು ತಿಳಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪರಿಹಾರ ಕೋರಿದ್ದೀರಿ ಎಂದರೆ ಸರಿಯಲ್ಲ. ಸುಳ್ಳು ಪರಿಹಾರ ಕೋರಿ ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪಿ ಬಿ ರಸ್ತೆಯ ಮಧ್ಯದಿಂದ 100 ಅಡಿ ಜಾಗ ಬಿಟ್ಟು ಕಟ್ಟಡ ಕಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ತಿಯ ಬಳಿ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸುಳ್ಳು. ದಾವಾಸ್ತಿಯ ದಕ್ಷಿಣಕ್ಕೆ ಪ್ಲಾಟ್ ನಂ.90 ರ ಆಸ್ತಿ ಇದೆ ಎಂದರೆ ಸರಿ. ದಾವಾಸ್ತಿಯ ದಕ್ಷಿಣಕ್ಕೆ 2 ನೇ ಪ್ರತಿವಾದಿಯ ಆಸ್ತಿ ಇದೆ ಎಂದರೆ ಸರಿ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯಲ್ಲಿ ಕಟ್ಟಡ ಕಟ್ಟಿದ್ದೀರಿ ಎಂದರೆ ಸರಿಯಲ್ಲ. 2016 ರಲ್ಲಿ ದಾವಾಸ್ತಿ ಖಾಲಿ ನಿವೇಶನ ಇತ್ತು ಎಂದರೆ ಸಾಕ್ಷಿ ಚಪ್ಪರದ ಮನೆ ಇತ್ತು ಎನ್ನುತ್ತಾರೆ. ಪ್ರತಿವಾದಿಗಳು ಓ ಎಸ್ 136/2016 ರಂತೆ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಗಳು ಇತ್ಯರ್ಥ್ಯಕ್ಕೆ ಬಾಕಿ ಇದ್ದಾಗ ನ್ಯಾ•ಯಾಲಯದ ಆದೇಶವನ್ನು ಉಲ್ಲಂಘಿಸಿ ಕಟ್ಟಡ ಕಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು ಒತ್ತುವರಿ ಮಾಡಿದ ಕಾರಣ ಪ್ರತಿವಾದಿಗಳು ಸೂಕ್ತ ರಕ್ಷಣೆ ಕೋರಿದ್ದಾರೆ ಎಂದರೆ ಸರಿಯಲ್ಲ. ನೀವು ಹೇಳುವ ಹಾಗೆ ಪ್ರತಿವಾದಿಗಳು ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ರಾಜೀ

ಸಂದಾನ ಆಗಿದೆ ಎಂದರೆ ಸರಿಯಲ್ಲ.   ಅದಕ್ಕೆ ದಾಖಲೆ ಬರೆದುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ದಾವೆಯ ಪರಿಹಾರಕ್ಕೆ ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.